Reg No M 1229 42nd Year Sri "Satyavadi" Mysore 3—1—1958

ಸತ್ಯವಾದಿ

ಬಿಡಿ ಪ್ರತಿ 3 ಪೈ] ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯರ್ಯ

ಯೋಜನಾ ಖರ್ಚಿನಲ್ಲಿ ಮೈಸೂರಿಗೆ ರೂ. 3 ಕೋಟಿ ಖೋತಾ

ಬೆಂಗಳೂರು 2 — ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು 58–59 ನೆಯ ಸಾಲಿನ ಪ್ರಾಂತ ಯೋಜನಾ ನಿಗದಿಯಲ್ಲಿ ಯೋಜನಾ ಸಮಿತಿ ಖೋತಾ ಮಾಡಿರುವದರಿಂದ ಅಶಯ ಹಾಗೂ ಅತೃಪ್ತಿಯ ಸಮ್ಮಿಶ್ರತೆ ವ್ಯಕ್ತಮಾಡಿದರು ಮೈಸೂರಿಗೆ ಬೇಕಾದ ಮೊದಲ ಲೆಕ್ಕಾಚಾರ ಎಂದರೆ ರೂ 40 ಕೋಟಿ ಕನಿಷ್ಠ ಅಗತ್ಯವೆಂದು ಅದು 28 ಕೋಟಿ ರೂ. ಆದವು ಈಗ ಅದರಲ್ಲೂ ರೂ. 3 ಕೋಟಿ ಖೋತಾ ಆದುದು ಮುಖ್ಯ ಮಂತ್ರಿಯವರು ಈ ರೀತಿ ವ್ಯಕ್ತಮಾಡಲು ಕಾರಣ.

ನಮಗೆ ಸಮಸ್ಯೆ ಅಲ್ಲ

ಬೆಂಗಳೂರು 2 — ಮೈಸೂರು ಪ್ರಾಂತಕ್ಕೆ ಹಿಂದಿ ಸಮಸ್ಯೆ ಅಲ್ಲವೆಂದು ಮುಖ್ಯ ಮಂತ್ರಿಯವರು ತಿಳಿಸಿದ್ದಾರೆ

ನಿಧಾನ ಆಗಬಹುದು

ಹೊಸ ತೂಕಗಳ ನಿರ್ಮಾಣಕ್ಕೆ ಲೋಹಗಳ ಅಭಾವವಿರುವದರಿಂದ ಮೆಟ್ರಿಕ್ಕು ತೂಕ ಮತ್ತು ಅಳತೆ ಜಾರಿ ಮಾಡುವದಲ್ಲಿ ನಿಧಾನ ಆಗಬಹುದೆಂದು ಗೊತ್ತಾಗಿದೆ

ಚಿರತೆಯನ್ನು ಹೊಡೆದುಕೊಂದ

ಗುರುವಾರ ತಿರುವೇಂದ್ರಂ ಹತ್ತಿರ ಇರುವ ಮಾನಕಾಡಿನ ರಸ್ತೆಗಳಲ್ಲಿ 2 ಚಿರತೆಗಳು ಬಂದಿದ್ದು 22 ವರ್ಷದ ತರುಣ ಸೋರ್ವ ಒಂದನ್ನು ಹೊಡೆದು ಕೊಂದನು ಮತ್ತೊಂದು ಓಡಿಹೋಯಿತು.

ನಿರಾಕರಣೆ

ಬೆಂಗಳೂರು 2 — ಮಂತ್ರಿಮಂಡಲದಲ್ಲಿ ಬಿಕ್ಕಟ್ಟುಂಟಾಗುವಂತೆ ಸಂಸ್ಥೆ ಮತ್ತು ಮಂತ್ರಿಮಂಡಲದಲ್ಲಿ ಮತಭೇದ ಉಂಟಾಗಿದೆ ಎಂಬ ವದಂತಿಯನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಿರಾಕರಿಸಿದರು.

ಡಿ. ಎಂ. ಕೆ. ಯಿಂದ ಕರಿ ಬಾವುಟ ಪ್ರದರ್ಶನ

ಪಾರ್ಲಿಮೆಂಟಿನ ಈರ್ವರು ಸದಸ್ಯರನ್ನೊಳಗೊಂಡ 17 ದ್ರಾವಿಡ ಮುನ್ನೇತ್ರ ಕಜಗಂ ಶಾಸನ ಸಭೆ ಸದಸ್ಯರು ಪಂ|| ನೆಹರು 6 ನೇ ತಾ|| ಆಗಮಿಸಿದಾಗ ಕರಿ ಬಾವುಟ ಪ್ರದರ್ಶನ ಮಾಡಲಿರುವರು ಪ್ರಧಾನಿಗಳು ಇಲ್ಲಿರುವ 21 ಗಂಟೆ ಕಾಲದಲ್ಲಿ ಅವರು ಎಲ್ಲೆಲ್ಲಿ ಭೇಟಿ ಕೊಡುವರೋ ಅಲ್ಲೆಲ್ಲ ಇದೇ ರೀತಿ ಮಾಡಲಿರುವರು. ವಿಜ್ಞಾನ ಕಾಂಗ್ರೆಸಿನ ಉದ್ಘಾಟನೆಯಲು ಪಂ|| ನೆಹರು ಮದರಾಸಿಗೆ ಆಗಮಿಸುವರು.

ಬಾಡಿಗೆ ಸೈಕಲ್ ಗಿರವಿ ಇಟ್ಟವರಿಗೆ ಶಿಕ್ಷೆ

ಬೆಂಗಳೂರು 2 — ಒಂದು ವರ್ಷದ ಹಿಂದೆ ಬೈಸಿಕಲ್ ಬಾಡಿಗೆ ತೆಗೆದು ಅದನ್ನು ಗಿರವಿ ಅಂಗಡಿಯಲ್ಲಿ ಗಿರವಿ ಇಟ್ಟು ಆರೋಪದ ಮೇಲೆ ಎಚ್. ಕೃಷ್ಣ ಸ್ವಾಮಿ ಅಲಿಯಾಸ್ ಎಚ್ ಕೆ ಸ್ವಾಮಿ ಎಂಬ ಭಾರತಿ ನಗರ ನಿವಾಸಿಗೆ 7 ದಿವಸ ಕಠಿಣ ಸಜೆ ವಿಧಿಸಲಾಯಿತು.

ದೆಹಲಿಗೆ ಗ್ರಹಾಂ

ಕರಾಚಿ 2 — ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ|| ಫ್ರಾಂಕ್ ಗ್ರಹಾಂ 9 ನೆಯ ತಾ|| ನ್ಯೂಯಾರ್ಕಿನಿಂದ ದೆಹಲಿಗೆ ಪ್ರಯಾಣ ಬೆಳಸುವರು.

ಕಾಶ್ಮೀರದ ಸಮಸ್ಯೆ ಇಲ್ಲ

ವಾರ್ಸಾ ಚೆರ್ರಿ 2 — ಕಾಶ್ಮೀರ ಭಾರತದ ಒಂದು ಭಾಗ ಆದ್ದರಿಂದ ನಮ್ಮ ದೇಶದಲ್ಲಿ ಕೆಲವರು ತಪ್ಪು ತಿಳಿದಿರುವರೀತಿ ಅದು ಸಮಸ್ಯೆಯಲ್ಲ ಎಂದು ರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣ ಮೆನನ್ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ ತಿಳಿಸಿದ್ದಾರೆ.

ಅಕ್ಕಿ ಅಭಾವ

ಆಹಾರ ಪದ್ಧತಿ ಬದಲಾಗಲೆಂದು ಸರ್ಕಾರದ ಮನವಿ

ಬೆಂಗಳೂರು 2 — ಪ್ರಪಂಚದಾದ್ಯಂತ ಅಕ್ಕಿ ಅಭಾವ ಇರುವದರಿಂದ ಜನರು ಆಹಾರ ಅಭ್ಯಾಸ ಬದಲಾಯಿಸಬೇಕೆಂದೂ, ತರಕಾರಿಗಳ ಉತ್ಪಾದನೆ ಮತ್ತು ಉಪಯೋಗ ಹೆಚ್ಚಿಸಬೇಕೆಂದೂ ಹೆಚ್ಚು ಮಾನು ಉತ್ಪಾದಿಸಿ ಅಕ್ಕಿಯನ್ನು ಇಲ್ಲದವರು ಉಪಯೋಗಿಸಬೇಕೆಂದೂ ಮೈಸೂರು ಸರ್ಕಾರ ಮನವಿ ಮಾಡಿದೆ.

ಬೆಂಕಿ ಅಪಾಹುತದಿಂದ ಸಾವು

ಶಿವಮೊಗ್ಗ 2 — ಕಳೆದ ಶುಕ್ರವಾರ ಚನ್ನಗಿರಿ ತಾಲ್ಲೂಕಿನ ಕೊಂಟಗೆರೆಯಲ್ಲಿ 7 ಗುಡಿಸಲುಗಳು ಬೆಂಕಿ ಅನಾಹುತಕ್ಕೆ ತುತ್ತಾಗಿ ಈರ್ವರು ಹುಡುಗರು ಸುಟ್ಟು ಸತ್ತರು.

ಭಾರತಕ್ಕೆ ಬ್ರಿಟ್ ಪ್ರಧಾನಿ

ಬ್ರಿಟನ್ನಿನ ಪ್ರಧಾನ ಮಂತ್ರಿಗಳಾದ ರೈ|| ಆ|| ಹೆರಾಲ್ಡ್ ಮಾಕ್ಮಿಲ್ಲರವರು 8 ನೇ ತಾ|| ಭಾರತಕ್ಕೆ ಬರುವರು ಲೇಡಿ ಮ್ಯಾಕ್ಮಿಲ್ಲರವರು ಅವರ ಜೊತೆಯಲ್ಲಿ ಬರುವರು. ರೈ|| ಆ|| ಸೆಂ' ನಾರ್ಮನ್ ಬ್ರೂಕ್‌ರವರು (ಕ್ಯಾಬಿನೆಟ್ ಕಾರ್ಯದರ್ಶಿ) ಎಂ|| ಜೇಂಸ್ (ಕಾಮನ್ವೆಲ್ತ್ ಸೌಹಾರ್ದ ಕಚೇರಿಯ ಕಾರ್ಯದರ್ಶಿ) ಎಂ|| ಈವಾಡ್ಸ್ (ಸಾರ್ವಜನಿಕ ಸಂಪರ್ಕ ಸಲಹೆಗಾರರು) — ಇವರೂ ಸಹ ಬ್ರಿಟಿಷ್ ಪ್ರಧಾನ ಮಂತ್ರಿಗಳೊಡನೆ ಬರುವರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ
4 ಚತುರ್ದಶಿ ಮೃಗಶಿರ

ಸರ್ಕಾರಿ ನೌಕರರಿಗೆ ಖಾದಿ ಟೋಪಿ

ಬೆಂಗಳೂರು 2 — ಸರ್ಕಾರಿ ಕಚೇರಿಗಳಲ್ಲಿ ಕೆಳದರ್ಜೆ ನೌಕರರಿಗೆ ಖಾದಿ ಟೋಪಿ ಕೊಡಲು ಸರ್ಕಾರ ತೀರ್ಮಾನಿಸಿದೆ

ಶಿಕ್ಷಣ ಸಂಸ್ಥೆಯ ಕಳ್ಳರು

ಲಕ್ನೊ — ಪ್ರಾಂತಾದ್ಯಂತ ಶಿಕ್ಷಣ ಸಂಸ್ಥೆಗಳಲ್ಲಿರುವ ವೈಜ್ಞಾನಿಕ ಉಪಕರಣಗಳನ್ನು ಕದಿಯುವ ವಿಪರ್ಯಾಟೊಂದನ್ನು ಪೋಲೀಸರು ಪತ್ತೆಹಚ್ಚಿದ್ದಾರೆ. ಇಲ್ಲಿಗೆ ಬಂದಿರುವ ವಾರ್ತೆಯಂತೆ ಅಲಿಘರಿನ 18 ವರ್ಷದ ವಿದ್ಯಾರ್ಥಿ ಮತ್ತು ಷಾಜಹಾನ್‌ಪುರದ 20 ವರ್ಷದ ವಿದ್ಯಾರ್ಥಿ ಈ ಕೃತ್ಯದಲ್ಲಿದ್ದವರೆಂದೂ ಈಗಾಗಲೇ 21 ಜಿಲ್ಲೆಗಳಲ್ಲಿ ಒಂದು ಲಕ್ಷ ರೂ ಬಾಳುವ ಉಪಕರಣಗಳನ್ನು ಕದ್ದಿರುದಾಗಿಯೂ ವರದಿ ಆಗಿದೆ.

ಲಂಡನ್ 2 — ಬ್ರಿಟಿಷ್ ಪ್ರಧಾನಿ ಮ್ಯಾಕ್ಮಿಲ್ಲನ್ ಮತ್ತು ಪಂ|| ನೆಹರುರವರ ಮಾತುಕತೆಗಳಲ್ಲಿ ನಿಶ್ಶಸ್ತ್ರೀಕರಣ ಸಮಸ್ಯೆ ಪರಿಶೀಲನೆಗೆ ಬರುವದಾಗಿ ಗೊತ್ತಾಗಿದೆ.

ಕರಾಚಿ 2 — ಅಧ್ಯಕ್ಷ ಇಸ್ಕಂದರ ಮಿರ್ಜಾರವರು ಈ ದಿನ ಮಾತನಾಡುತ್ತಾ ಭಾರತದಲ್ಲಿ ನಂಬಿಕೆ ಹೋಗುತ್ತಿದೆ ಎಂದರು ಮತ್ತು ಕಾಶ್ಮೀರದ ಬಗ್ಗೆ ಬೇಗ ಒಪ್ಪಂದ ಆಗುವಂತೆ ಕಾಣುವುದಿಲ್ಲ ಎಂದರು

ಸಿಲಾಂಗ್ — ಅಕ್ರಮವಾಗಿ ಗಡಿಯಲ್ಲಿರುವ ನಟನೆಯಿಂದ ಪೂರ್ವ ಪಾಕಿಸ್ತಾನದ ಕಾಸಿ ಜೈಟಿಯಾ ಬೆಟ್ಟಗಳು ಮತ್ತು ಸಿಲ್‌ಹಟ್ ಗಡಿಯಲ್ಲಿ ಪಾಕಿಸ್ತಾನ ಸೇನೆಯು ವಿಪರೀತವಾಗಿ ಜಮಾವಣೆ ಮಾಡಲ್ಪಡುತ್ತಿದೆ ಎಂಬ ವಿಷಯವನ್ನು ಕಾಸೀ ನಾಯಕ ಮತ್ತು ಮಾಜಿ ಮಂತ್ರಿ ರೆ || ನಿಕೊಲಾಸ್ ರಾಯ್‌ರವರು ಪಂ || ನೆಹರೂರವರಿಗೆ ತಿಳಿಸಿದ್ದಾರೆ

ಒಂದು ಲೋಟಾ ನೀರಿಗೆ ಅರ್ಧ ರಾಜ್ಯ !

ಮೊಗಲ್ ಚಕ್ರವರ್ತಿಯಾದ ಅಕ್ಬರು ಮಹಾಶಯನಿಗೂ ಅತನ ವಿದೂಷಕ ಚಕ್ರವರ್ತಿಯಾದ ಬೀರಬಲ್ಲನಿಗೂ ನಡೆದ ಒಂದು ಸ್ವಾರಸ್ಯವಾದ ಸಂವಾದ ಕಥೆ ಇದು ; ಒಮ್ಮೆ ಚಕ್ರವರ್ತಿಯು ಬೀರಬಲ್ಲನೂ ಕಾಡಿಗೆ ಬೇಟೆಗೆ ಹೋಗಿದ್ದಾಗ ಬೀರಬಲ್ಲನು ' ಪ್ರಭುವೇ ತನುಗೆ ಒಂದು ವಿಶ್ವಾಸವಾದ ರಾಜ್ಯವುಂಟೆ ? ಆದರೆ, ತಮಗೆ ಈಗ ಬಹಳ ಸೀರಡಿಕೆಯಾಗಿ ಹತ್ತಿರದಲ್ಲಿ ಎಲ್ಲಿಯೂ ನೀರು ಸಿಕ್ಕದಿದ್ದರೆ ಏನಾಗ ವುದು ? ' ಎಂದು ಕೇಳಿದನಂತೆ. ' ನೀರು ಸಿಕ್ಕದಿದ್ದರೆ ಕೇಳಬೇಕೆ, ಖಂಡಿತವಾಗಿ ನಾನು ಸಾಯುವೆನು ' ಎಂದು ಅಕ್ಬರ್ ಉತ್ತರವಿತ್ತನು ' ಆದರೆ, ಪ್ರಭುವೇ, ಇಂಥಾ ಸಮಯದಲ್ಲಿ ಯಾವನಾದರೂ ಬಂದು ' ತಮ್ಮ ಅರ್ಧ ರಾಜ್ಯವನ್ನು ಕೊಡುವುದಾದರೆ ಒಂದು ಲೋಟ್ಟಾ ನೀರು ಕೊ ಟ್ಟೆ ೀನು ' ಎಂದರೋ ? ಅದಕ್ಕೆ ತಾವು ಒಪ್ಪೀರೇನು ? '

ಈ ಪ್ರಶ್ನೆಗೆ ಉತ್ತರವಾಗಿ ಅಕ್ಬರನು ' ಖಂಡಿತವಾಗಿಯೂ ಒಪ್ಪುವೆನು ; ನನ್ನ ಪ್ರಾಣವನ್ನೇ ಉಳಿಸಿಕೊಳ್ಳುವ ಸಂದರ್ಭವು ಇದ್ದರೆ, ಯಾರು ತಾನೇ ಅರ್ಧ ರಾಜ್ಯವನ್ನು ಬಿಟ್ಟುಕೊಡಲಾರರು ' ಎಂದನು.

ಬೀರಬಲ್ಲನು ಮುಂದುನರಿದು ಇಂತೆಂದನು— ಓ ಬಾದಷಹನೇ, ಆ ನೀರೆ ನ್ನು ಕುಡಿದವೆ ಲೆ ಶರೀರದಲ್ಲಿ ಯಾವುದೋ ದೋಷವಿದ್ದರಿಂದ ಮೂತ್ರ ವಿ ಸರ್ಜನೆಗೆ ಅಡ್ಡಿಯಾಗಿ ತಮಗೆ ತುಂಬಾ ವ್ಯಥೆಯಾದರೆ ಅದಕ್ಕಾಗಿ ಯಾವ ವೈ ದ್ಯರನ್ನು ಕೇಳಿದರೂ ಆ ವ್ಯಾಧಿಯನ್ನು ಗುಣಪಡಿಸುವುದು ಆಗಲಿಲ್ಲವೆಂದು ಕಂಡು ಬಂದರೆ, ಆಗ ಏನಾಗುವುದು ? '

ಅಕ್ಬರನು ವೈದ್ಯರಿಂದ ಗುಣಪಡಿಸುವುದು ಆಗದಿದ್ದರೆ ನಾನು ಸಾಯಲೇ ಬೇಕಾಗುವುದು ' ಎಂದನು.

' ಪ್ರಭುವೇ, ಈಗ ಕೇಳಿರಿ ; ತೀರಕೊನೆಗೆ, ನಿಮಗೆ ಪ್ರಾಣ ಉಳಿದೀತೋ ಇಲ್ಲವೋ ಎಂಬುದು ಸಂಶಯಾಸ್ಪದವಾಗಿರುವಲ್ಲಿ, ಯಾವನೋ ಒಬ್ಬನು ಬಂದು ' ನಾನು ನಿಮ್ಮ ರೋಗವನ್ನು ಗುಣಪಡಿಸುವೆನು, ಆದರೆ ಈಗ ತಮಗೆ ಉಳಿದಿ ರುವ ಅರ್ಧ ರಾಜ್ಯವನ್ನು ಕೊಟ್ಟಬಿಡಬೇಕು ' ಎಂದರೋ ? ಆಗಲೂ ನೀವು ಒಪ್ಪುವಿರೇನು ? ' ಎಂದು ಬೀರಬಲನು ಕೇಳಲು, ಅಕ್ಬರನು ' ಏಕೆ ಒಪ್ಪಬಾರದು ? ತನ್ನ ಪ್ರಾಣವನ್ನೇ ಉಳಿಸಿಕೊಳ್ಳುವ ಸಂದರ್ಭವಿದ್ದರೆ ಯಾವನು ತಾನೇ ಅರ್ಧ ರಾಜ್ಯವನ್ನು ಕೊಟ್ಟುಬಿಡಬೇಕು ಎಂದರೋ ? ಆಗಲೂ ನೀವು ಒಪ್ಪುವಿ ರೇನು ? ' ಎಂದು ಬೀರಬಲನು ಕೇಳಲು, ಅಕ್ಬರನು ' ಏಕೆ ಒಪ್ಪಬಾರದು ? ತನ್ನ ಪ್ರಾಣವನ್ನೇ ಉಳಿಸಿಕೊಳ್ಳುವ ಸಂದರ್ಭವಿದ್ದರೆ ಯಾವನು ತಾನೇ ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡದೆ ಇದ್ದಾನು ? ' ಎಂದನು.

[ಎಂಕ್ಕಿದ್ದು ನಾಳೇ ಸಂಚಿಕೆಯಲ್ಲಿ

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ಪಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿ ಮಿ ಟೆ ಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್

ವುಡ್‌ಲ್ಯಾಂಡ್ಸ್
ಪ್ರಶಂಸನೀಯ 11 ನೆವಾರ

ಮದರ್ ಇಂಡಿಯ
ವರ್ಣರಂಜಿತ ಹಿಂದಿ ಚಿತ್ರರತ್ನ
ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್
26—12—57 ರಿಂದ
— ಅವೋಘ ತೆಲುಗು ಚಿತ್ರ —
ಜಯಸಿಂಹ
ಪಾತ್ರ— ಅಂಜಲಿದೇವಿ, ಗುಮ್ಮಡಿ
ಎಸ್ ಟಿ ರಾಮರಾವ್, ರೇಲಂಗಿ
[ಪ್ರತಿದಿನ 3 ಆಟಗಳು]
ಪ್ರತಿ ಶುಕ್ರವಾರ, ಶನಿವಾರ, ಭಾನುವಾರ
ಬೆಳಗಿನ ಪ್ರದರ್ಶನ 10—30 ಕ್ಕೆ

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1—80

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ
ಅಶೋಕಾ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing
L. N. Press
Sivarampet. Mysore

ಅಪೆರಾ— ಜಯಪ್ರದ 3 ನೇ ವಾರ
ಮಾಯಾಬಜಾರ್
ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ರೇಲಂಗಿ
ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ
ಪ್ರತಿ ದಿನ 3 ಆಟಗಳು

SHAKTI SUDHA
A Superb Tonic

Protect the cow ಗೋ ಸಂರಕ್ಷಣೆ ಮಾಡಿ
ಗೋರಕ್ಷಣ ಪತ್ರಿಕೆಗೆ ಜೊತೆಗಾರನಾಗಿರಿ

Edited, Printed& Published by Dharma Rao Krishna Rao at the Satyavadi Press Chamrajpura Mysore